# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ–49, ರಾಜರಾಜೇಶ್ವರಿ ನಗರ (ಹಳೆ ವಾರ್ಡ್ ಸಂಖ್ಯೆ.160) ರಲ್ಲಿ ದಿನಾಂಕ: 17.09.2022 ರಂದು, ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು**

ಸೆಪ್ಟಂಬರ್–2022 ಮಾಹೆಯ ಮೂರನೇ ಶನಿವಾರದ **ವಾರ್ಡ್** ಸಮಿತಿ ಸಭೆಯನ್ನು ದಿನಾಂಕ: 17.09.2022 ರಂದು ಮಾನ್ಯ ವಲಯ ಆಯುಕ್ತರು, ರಾಜರಾಜೇಶ್ವರಿ ನಗರ ವಲಯ ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು

**ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

- ಹೊಸಕೆರೆಹಳ್ಳಿ ಕೆರೆ ಸಂರಕ್ಷಣಾ ವೇದಿಕೆ ಯ ವತಿಯಿಂದ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ.49 ರವರಿಗೆ ಹೊಸಕೆರೆಹಳ್ಳಿಯ ಕೆರೆ ಒತ್ತುವರಿ ತೆರವುಗೊಳಿಸಲು, ಕೆರೆಗೆ ಸೇರುತ್ತಿರುವ ತ್ಯಾಜ್ಯವನ್ನು ತಡೆಯಲು ಹಾಗೂ ಕೆರೆಯನ್ನು ಸಂರಕ್ಷಿಸಿ ಅಭಿವೃದ್ಧಿಪಡಿಸಲು ಮನವಿ ಪತ್ರವನ್ನು ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ವಾರ್ಡ್ ಅಭಿಯಂತರರು ಸದರಿ ಪತ್ರವನ್ನು ಪಾಲಿಕೆಯ ಕೆರೆಗಳ ವಿಭಾಗಕ್ಕೆ ವರ್ಗಾಯಿಸಿ ಕೆರೆ ಅಭಿವೃದ್ಧಿಪಡಿಸಲು ಕೋರಲಾಗುವುದೆಂದು ತಿಳಿಸಿದರು.

- ಶ್ರೀ.ಹರೀಶ್ ಕುಮಾರ್ ಎಂಬುವವರು ಬಿಇಎಂಎಲ್ 4ನೇ ಹಂತದಲ್ಲಿರುವ ಶ್ರೀ.ಕಾಲಭೈರವೇಶ್ವರ ದೇವಸ್ಥಾನದ ಬಳಿ Road Hump ಅನ್ನು ಅಳವಡಿಸಲು ಕೋರಿದರು. Road Hump ಅನ್ನು ಅಳವಡಿಸಿದ ನಂತರ ಅಲ್ಲಿ ನಾಮಫಲಕವನ್ನು ಅಳವಡಿಸಲು ಕೋರಿದರು.
- ನಂತರ ಹರೀಶ್ ರವರು ದೊಡ್ಡ ದೊಡ್ಡ Hump ಗಳನ್ನು ಅಳವಡಿಸುವುದರಿಂದ ಅಪಘಾತಗಳಾಗುವ ಸಂಭವವಿರುತ್ತದೆ, ಆದ್ದರಿಂದ ವೈಜಾನಿಕವಾಗಿ ಪರಿಶೀಲಿಸಿ ಬಿಳಿ ಪಟ್ಟಿಯ (Step Hump)ಗಳನ್ನು ಅಳವಡಿಸಲು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ವಾರ್ಡ್ ಅಭಿಯಂತರರು ಈ ಬಗ್ಗೆ ಪಾಲಿಕೆಯ ಟ್ರಾಫಿಕ್ ವಿಭಾಗಕ್ಕೆ ಮನವಿ ಮಾಡಲಾಗುವುದೆಂದು ತಿಳಿಸಿದರು.

- ಹೊಸಕೆರೆಹಳ್ಳಿ ನಿವಾಸಿಯಾದ ಶ್ರೀಮತಿ ರಚನಾ ರವರು ರಾಜರಾಜೇಶ್ವರಿನಗರದಲ್ಲಿ ಫ್ಲೆಕ್ಸ್ ಹಾಗೂ ಬ್ಯಾನರ್ ಅಳವಡಿಸುವವರ ವಿರುದ್ಧ ಕ್ರಮ ಜರುಗಿಸಿ ಫ್ಲೆಕ್ಸ್ ಹಾಗೂ ಬ್ಯಾನರ್ ಅಳವಡಿಸದಂತೆ ಕ್ರಮ ವಹಿಸಲು ಕೋರಿದರು.
- ಹರೀಶ್ ಕುಮಾರ್ ಎನ್ನುವವರು ಪಾದಚಾರಿ ಮಾರ್ಗ ಒತ್ತುವರಿ ಮಾಡಿಕೊಂಡು ವ್ಯಾಪಾರ ನಡೆಸುತ್ತಿದ್ದು ಮುಂದಿನ ವಾರದೊಳಗೆ ದಿನಾಂಕ ನಿಗಧಿಪಡಿಸಿ ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಲು ಕ್ರಮ ವಹಿಸುವಂತೆ ಕೋರಿದರು.
- ಸತೀಶ್ ಎನ್ನುವವರು ಸಪ್ತಗಿರಿ ಬಡಾವಣೆಯಲ್ಲಿ ಉಂಟಾಗಿರುವ ರಸ್ತೆಗುಂಡಿಗಳನ್ನು ತುರ್ತಾಗಿ ಮುಚ್ಚಲು ಕೋರಿದರು ಹಾಗೂ ಹೊಸಕೆರೆಹಳ್ಳಿ ಕೆರೆಗೆ ಸೇರುತ್ತಿರುವ ತ್ಯಾಜ್ಯವ ಹಾಗೂ ಕಲುಷಿತ ನೀರನ್ನು ತಡೆಯಲು ಕ್ರಮ ವಹಿಸುವಂತೆ ಕೋರಿದರು.
- ಶ್ರೀಮತಿ.ರಚನಾ ರವರು ಸ್ವಯಂ ಸೇವಕ ಕಾರ್ಡ್ ನ್ನು (Volunteer card) ಅನ್ನು ವಿತರಿಸಲು ಕೋರಿದರು. ಇದರಿಂದ ಕಸ ಹಾಕುವವರನ್ನು ತಡೆಯಲು ಮುಂದಾದಾಗ ಬೆದರಿಕೆ ಹಾಕುತ್ತಿದಾರೆ ಆದುದರಿಂದ Volunteer card ಅನ್ನು ನೀಡಿದಲ್ಲಿ ಸ್ವಯಂಸೇವೆ ಮಾಡಲು ಅವಕಾಶವಿರುತ್ತದೆ ಎಂದು ಹೇಳಿದರು.
- ಕಟ್ಟಡದ ಮಾಲೀಕರುಗಳು ಪಾರ್ಕಿಂಗ್ ಮೀಸಲಿರಿಸುವ ಜಾಗವನ್ನು ವಾಣಿಜ್ಯ ಬಳಕೆಗೆ ಬಾಡಿಗೆಗೆ ನೀಡಿರುವುದರಿಂದ ಸಾರ್ವಜನಿಕರು ರಸ್ತೆಯಲ್ಲಿ ವಾಹನವನ್ನು ಪಾರ್ಕಿಂಗ್ ಮಾಡುತ್ತಿರುತ್ತಾರೆ ಇದರಿಂದ ರಾಜರಾಜೇಶ್ವರಿನಗರದ ಹಲವು ಮುಖ್ಯ ರಸ್ತೆಗಳಲ್ಲಿ ಬೆಳಿಗ್ಗೆ ಮತ್ತು ಸಂಜೆ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿದ್ದು, ಸೂಕ್ತ ಕ್ರಮ ವಹಿಸುವಂತೆ ಕೋರಿದರು.
- ಸಪ್ತಗಿರಿ ಬಡಾವಣೆ ನಿವಾಸಿಯಾದ ಶ್ರೀ ಸತೀಶ್ ರವರು ಹೊಸಕೆರೆಹಳ್ಳಿ ಕೆರೆ ಈ ಹಿಂದೆ 55 ಎಕರೆ ಇತ್ತು ಇಂದು 30 ಎಕರೆ ಇದೆ ಬಾಕಿ 20 ಎಕರೆ ಒತ್ತುವರಿಯಾಗಿದೆಯೆಂದು ದೂರು ನೀಡಿ ಒತ್ತುವರಿ ತೆರವುಗೊಳಸಿಲು ಮಾನ್ಯ ವಲಯ ಆಯುಕ್ತರು, ರಾರಾನಗರ ವಲಯ ರವರಲ್ಲಿ ಮನವಿ ಮಾಡಿದರು ಇದಕ್ಕೆ ಪ್ರತಿಕ್ರಿಯಿಸಿದ ವಲಯ ಆಯುಕ್ತರು ಈ ಬಗ್ಗೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಕ್ರಮ ವಹಿಸುವಂತೆ ಸೂಚಿಸಲಾಗುವುದು, ಸಾರ್ವಜನಿಕರು ಒತ್ತುವರಿಯನ್ನು ತೆರವುಗೊಳಿಸಲು ಅಧಿಕಾರಿಗಳೊಂದಿಗೆ ಸಹಕರಿಸಬೇಕು ಎಂದು ತಿಳಿಸಿದರು.
- ಕೋವಿಡ್ ಸಮಯದಲ್ಲಿ "Marshals"ರವರು ತುಂಬಾ ಅದ್ಬುತವಾಗಿ ಕಾರ್ಯ ನಿರ್ವಹಿಸಿದರುವುದಕ್ಕೆ ಅಭಿನಂದನೆ ತಿಳಿಸಿದರು. ಹಾಗೂ ಸಾರ್ವಜನಿಕರು ಜನರು ಕಸವನ್ನು ಎಲ್ಲೆಂದರಲ್ಲಿ ಕಸ ಎಸೆಯುವುದನ್ನು ತಡೆಗಟ್ಟಲು ಹೆಚ್ಚಿನ "Marshals" ಗಳನ್ನು ನಿಯೋಜಿಸಬೇಕೆಂದು ಕೇಳಿಕೊಂಡರು. ಇದಕ್ಕೆ ಪ್ರತಿಕ್ರಿಯಿಸಿದ

ಮಾನ್ಯ ವಲಯ ಆಯುಕ್ತರು, ಎಷ್ಟು ಮಾರ್ಷಲ್ ಗಳ ಅವಶ್ಯಕತೆಯಿದೆಯೆಂದು ಪಟ್ಟಿ ನೀಡುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.

- ಹರೀಶ್ ಎನ್ನುವರು ಕೆರೆಗಳಿಗೆ ಒಳಚರಂಡಿ ನೀರು ಹಾಗೂ ತ್ಯಾಜ್ಯನೀರು ಹರಿಯುವುದನ್ನು ಸ್ಥಗಿತಗೊಳಿಸುವಂತೆ ಹಾಗೂ ಒಳಚರಂಡಿನೀರು ಹಾಗೂ ತ್ಯಾಜ್ಯನೀರು ಹರಿಯುವುದನ್ನು ಸ್ಥಗಿತಗೊಳಿಸಿದರೆ ಅರ್ಧ ಬಾಗದಷ್ಟು ಕೆರೆಯನ್ನು ಸಂರಕ್ಷಿಸಬಹುದು ಎಂದು ಹೇಳಿದರು ಇದಕ್ಕೆ ಪ್ರತಿಕ್ರಿಯಿಸಿದ ವಲಯ ಆಯುಕ್ತರು ತ್ಯಾಜ್ಯ ಉಂಟಾಗುತ್ತಿರುವ ಮೂಲವನ್ನು ಗುರುತಿಸಿ ತಡೆಯಲು ಜನರ ಪ್ರೋತ್ಸಾಹ ಹಾಗೂ ಬೆಂಬಲ ಬೇಕು ಎಂದು ಹೇಳಿದರು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಸ್ಥಳ ಪರಿಶೀಲನೆ ನಡೆಸಿ ಸೂಕ್ತ ಕ್ರಮ ವಹಿಸುವುದಾಗಿ ತಿಳಿಸಿದರು..
- ವಾರ್ಡ್ ಸಮಿತಿಯ ಸದಸ್ಯರು Shivaji Tea Stall ಬಳಿ NO SMOKING ಬೋರ್ಡ್ ನ್ನು ಅಳವಡಿಸುವಂತೆ ಕೋರಿದರು.
- ಬಿಇಎಂಎಲ್ 3ನೇ ಹಂತದಲ್ಲಿ ಹೊಸದಾಗಿ CULVERT ನಿರ್ಮಿಸುವಂತೆ ಆ ಭಾಗದ ನಿವಾಸಿಯೋರ್ವರು ಕೋರಿದರು.

ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ-49

ಸಹಿ/-
ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-49

**ಪ್ರತಿಯನ್ನು:-**

1. ಮಾನ್ಯ ವಲಯ ಆಯುಕ್ತರು ರಾರಾನಗರ ವಲಯ ರವರ ಮಾಹಿತಿಗಾಗಿ.
2. ಮಾನ್ಯ ಜಂಟಿ ಆಯುಕ್ತರು
3. ರಾರಾನಗರ ವಲಯ ರವರ ಮಾಹಿತಿಗಾಗಿ.
4. ಮುಖ್ಯ ಅಭಿಯಂತರರು ರಾರಾನಗರ ವಲಯರವರ ಮಾಹಿತಿಗಾಗಿ.
5. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
6. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
7. ವಾರ್ಡ್ ಸಮಿತಿ ಸದಸ್ಯರುಗಳಿಗೆ.
8. ಕಛೇರಿ ಪ್ರತಿ.